Drinking Water Supply in the Villages included in the Limits of Bangalore Corporation

680. Sri M. S. KRISHNAN (Malleswaram).—

Will the Minister of State for Municipal Administration be pleased to state :—

(*a*) whether the Government is aware that the residents of Subedarpalya, Mattikere, Bovipalya, Shivanahalli, Agrahara Dasarahalli are not provided with drinking water facilities by the Corporation ;

(*b*) whether representations have been received by the residents of the areas to provide adequate drinking water facilities and other minimum civic amenities such as drainage, roads, etc.;

(*c*) the steps they are taking or intending to take to provide immediately at least a few public fountain in these areas ?

Sri B. M. PATIL (Minister of State for Municipal Administration).—

(*a*) No. There are drinking water wells in use in all the villages except Bovipalya where a public fountain is provided.

(*b*) Yes.

(*c*) The Bangalore Water Supply and Sewerage Board has been requested to provide water supply to all the Villages included in the limits of the Corporation. Public taps will be provided as soon as the water mains are laid.

ಶ್ರೀ ಎಂ. ಎಸ್. ಕೃಷ್ಣನ್.—ತಾವು (ಅ)ಗೆ ಉತ್ತರ ಕೊಡುತ್ತಾ, ಬೋವಿಪಾಳ್ಯವನ್ನುಳಿದು ಎಲ್ಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಬಳಕೆಯಲ್ಲಿದ್ದು, ಬೋವಿಪಾಳ್ಯದಲ್ಲಿ ಒಂದು ಸಾರ್ವಜನಿಕ ಕಾರಂಜಿಯನ್ನೊದಗಿಸಲಾಗಿದೆ ಎಂದು ಹೇಳಿದ್ದೀರಿ. ತಾವು ಈ ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದೀರೋ ಇಲ್ಲಪ್ಪೋ ಗೊತ್ತಿಲ್ಲ. ಒಂದು ವಿಚಾರವನ್ನು ತಮ್ಮಲ್ಲಿ ಕೇಳಬಯಸುತ್ತೇನೆ, ಈ ಹಳ್ಳಿಗಳಲ್ಲಿರುವ ಬಾವಿ ನೀರನ್ನು ಜನರು ಉಪಯೋಗ ಮಾಡುವುದಕ್ಕೆ ಸಾಧ್ಯವಿದೆಯೇ, ಮತ್ತು ನೀರು ಬಾವಿಗಳಲ್ಲಿ ಎಷ್ಟು ಆಳದಲ್ಲಿದೆ, ಈ ಬಾವಿಗಳನ್ನು ಕಟ್ಟಿಸಿ ಎಷ್ಟು ವರ್ಷಗಳಾಯಿತು ಎಂಬ ಬಗ್ಗೆ ನಿಮ್ಮ ಅಧಿಕಾರಿಗಳು ವಿವರಗಳನ್ನು ಕೊಟ್ಟಿದ್ದಾರೆಯೇ ?

1-30 P.M.

ಶ್ರೀ ಬಿ. ಎಂ. ಪಾಟೀಲ್.—ಎಲ್ಲ ಹಳ್ಳಿಗಳಲ್ಲೂ ಕುಡಿಯುವ ನೀರನ್ನು ಪೂರೈಸಬೇಕು ಎಂದು ಈಗಾಗಲೇ ಪಾಟರು ಬೋರ್ಡಿನವರು ಮೇನ್‌ಗಳನ್ನು ಹಾಕಬೇಕೆಂದು ಅವರಿಗೆ ಬರೆಯಲಾಗಿದೆ. ಅವರೂ ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈ ಹಳ್ಳಿಗಳಲ್ಲಿನ ನೀರಿನ ಅಭಾವ ಇದೆ ಎಂದು ಲಾರಿಗಳ ಮುಖೇನ ನೀರನ್ನು ಹಂಚುವ ಏರ್ಪಾಡು ಮಾಡುತ್ತಿದ್ದಾರೆ ಮತ್ತು ಎಲ್ಲೆಲ್ಲಿ ಬಾವಿಗಳಿವೆಯೋ ಅದನ್ನು ಇನ್ನೂ ಹೆಚ್ಚಾಗಿ ಆಳವಾಗಿ ಮಾಡಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಸೂಚನೆಗಳನ್ನು ಕೊಡಲಾಗಿದೆ. ಪಾಟರು ಬೋರ್ಡಿನವರು ಹಾಗೂ ಕಾರ್ಪೊರೇಷನ್ನಿನವರು ಇಬ್ಬರೂ ಕೂಡಿಕೊಂಡು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕುಡಿಯುವ ನೀರಿನ ಸೌಕರ್ಯ ಮಾಡಿಕೊಡಲು ಎಲ್ಲ ಹಳ್ಳಿಗಳಿಗೂ ಎಷ್ಟು ಹಣ ಇಟ್ಟಿದ್ದೀರಿ ಮತ್ತು ಯಾವ ಹಳ್ಳಿಗಳಿಗೆ ಈಗಾಗಲೇ ನಲ್ಲಿಗಳನ್ನು ಒದಗಿಸಿದ್ದೀರಿ ?

ಶ್ರೀ ಬಿ. ಎಂ. ಪಾಟೀಲ್.—ಎಲ್ಲ ಹಳ್ಳಿಗಳಿಗೂ ಇನ್ನೂ ನಲ್ಲಿಗಳನ್ನು ಕೊಟ್ಟಿಲ್ಲ. ಒಂದು ಹಳ್ಳಿಯೊಳಗೆ ಮಾತ್ರ ಸಬ್ ಮೇರ್ ಹಾಕಲಾಗಿದೆ. ಉಳಿದ ಕಡೆಗಳಲ್ಲಿ ಮೇನುಗಳನ್ನು ಹಾಕ ಬೇಕೆಂದು ಪಾಟರು ಬೋರ್ಡು ಕಡೆಗೆ ತಿಳಿಸಿದೆ. ಸುಮಾರು ಇವಕ್ಕೆಲ್ಲಾ ಒಂದು ಲಕ್ಷದಷ್ಟು ಖರ್ಚು ಮಾಡಬೇಕೆಂದು ಇದ್ದರೂ ಇಲ್ಲಿ ಟ್ಯಾಕ್ಸ್‌ಗಳಿಂದ ವಸೂಲಾಗುವುದು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಆದರೂ ಟ್ಯಾಕ್ಸ್‌ಗಳಿಂದ ಬರುವುದಕ್ಕಿಂತ ಹೆಚ್ಚು ಖರ್ಚು ಇಲ್ಲಿ ಮಾಡಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಗ್ರಹಾರದಾಸನಹಳ್ಳಿ ಮೇಲುಗಡೆ ತಿಮ್ಮೇನಹಳ್ಳಿ ಇದೆ. ತಿಮ್ಮೇನಹಳ್ಳಿಗೆ ಹೋಗಬೇಕಾದರೆ ಅಗ್ರಹಾರದಾಸರಹಳ್ಳಿ ಮೂಲಕವೇ ಹೋಗಬೇಕು. ತಿಮ್ಮೇನ ಹಳ್ಳಿ ಕಾಂಗ್ರೆಸ್ ಸದಸ್ಯರಾದ ಶ್ರೀ ದಯಾನಂದಸಾಗರ್‌ರವರ ಕ್ಷೇತ್ರ. ತಿಮ್ಮೇನಹಳ್ಳಿಗೆ ನಲ್ಲಿಗಳನ್ನು ಹಾಕಿಸಿ ಅಗ್ರಹಾರದಾಸರಹಳ್ಳಿಗೆ ಏಕೆ ಹಾಕಲಿಲ್ಲ. ಕುಡಿಯುವ ನೀರಿನಲ್ಲಿ ಇಂತಹ ತಾರತಮ್ಯ ವನ್ನೇಕೆ ಮಾಡಲಾಗುತ್ತಿದೆ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಿಗೆ ನಾನು ಆಗಲೇ ಹೇಳಿದ ಹಾಗೆ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಪಾಟಾಳ್ ನಾಗರಾಜ್.—ಈ ಪ್ರದೇಶಗಳೆಲ್ಲಾ ಕಾರ್ಪೊರೇಷನ್‌ಗೆ ಸೇರಿದ ಮೇಲೆ ಯಾವ ಕಾರ್ಯಕ್ರಮಗಳನ್ನು ಹಾಕಿ ಅಭಿವೃದ್ಧಿ ಮಾಡಿದ್ದೀರಿ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಿಗೆ ಬೇಕಾದರೆ ಅಂಕಿ ಸಂಖ್ಯೆಗಳನ್ನು ಓದಗಿಸಿ ಕೊಡುತ್ತೇನೆ. ಅಗ್ರಹಾರ ದಾಸರಹಳ್ಳಿಯಲ್ಲಿ ಮೂರು ವರ್ಷಗಳಿಂದ ಟ್ಯಾಕ್ಸ್ ವಸೂಲಾಗಿರುವುದು ಸುಮಾರು 29 ಸಾವಿರ, ನಾವು ಖರ್ಚು ಮಾಡಿರುವುದು 30 ಸಾವಿರ, ಶಿವನಹಳ್ಳಿಯಲ್ಲಿ ಕಲೆಕ್ಷನ್ ಆಗಿರುವುದು 716. ಆದರೆ ನಾವು ಖರ್ಚು ಮಾಡಿರುವುದು 34,700, ಬೋವಿಪಾಳ್ಯದಲ್ಲಿ ಕಲೆಕ್ಷನ್ ಏನೂ ಇಲ್ಲ. ನಾವು 20,500 ರೂಪಾಯಿ ಖರ್ಚು ಮಾಡಿದ್ದೇವೆ, ಸುಭೇದಾರ್ ಪಾಳ್ಯದಲ್ಲಿ ವಸೂಲು ಮಾಡಿರುವುದು 7 ಸಾವಿರ, ನಾವು ಖರ್ಚು ಮಾಡಿರುವುದು 26 ಸಾವಿರ, ಮತ್ತಿಕೆರೆಯಲ್ಲಿ ವಸೂಲು ಮಾಡಿರುವುದು 28 ಸಾವಿರ, ಖರ್ಚು ನಾವು ಮಾಡಿರುವುದು 66 ಸಾವಿರ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಕಾರ್ಪೊರೇಷನ್ನಿನ ಸುತ್ತಮುತ್ತಲ ಹಳ್ಳಿಗಳು ಎಂದರೆ ಸುಮಾರು 33 ಹಳ್ಳಿಗಳು ಎಂದರೂ ಇವು 33 ಸ್ಲಂಗಳೇ ಆಗಿರುವಂತಹವುಗಳು. ಇಂತಹ ಸ್ಲಂಗಳನ್ನು ಕ್ಲಿಯರು ಮಾಡಲು ಏನು ಅನುಕೂಲಮಾಡಿದ್ದೀರಿ ಮತ್ತು ಇಲ್ಲಿನ ಜನ ಕುಡಿಯುವ ನೀರಿಗೆ ಒಂದೆರಡು ನಲ್ಲಿಗಳು ಒಂದೆರಡು ದೀಪಗಳು ಎಂದು ಮಾಡಿದರೆ ಸರಿಹೋಗು ತ್ತದೆಯೇ ? ಇದರ ಬಗ್ಗೆ ಸೂಕ್ತವಾದ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರಿಗೆ ಎಲ್ಲ ವಿವರಗಳನ್ನೂ ಕೊಟ್ಟಿದ್ದೇನೆ. ಇಲ್ಲಿ ರಸ್ತೆಗಳಾಗಲೀ ಯಾವ ಕೆಲಸಗಳಾಗಲೀ ಇನ್ನೂ ಆಗಿಲ್ಲ. ಇವನ್ನು ಮಾಡಲು ಒಂದು ರೀತಿ ಯಾದ ಫೇಸ್ಡ್ ಪ್ರೋಗ್ರಾಂ ಮಾಡಿಕೊಂಡು ಮಾಡುತ್ತಿದ್ದೇವೆ. ಅಲ್ಲದೆ ಇಲ್ಲ ವಸೂಲಾಗುವ ಕಂದಾಯದ ಹಣ ಸಾಕಷ್ಟು ಇಲ್ಲದಿದ್ದರೂ ಕೂಡ ಕೆಲವು ಕಡೆಗಳಲ್ಲಿ 2–3–4 ಪಟ್ಟುಗಳಷ್ಟು ಹೆಚ್ಚು ಖರ್ಚು ಮಾಡಿ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡಬೇಕೆಂದು ತಕ್ಕ ಕಾರ್ಯಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—(ಸಿ) ಗೆ ಉತ್ತರವಾಗಿ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಈಗ ತಾವು ಇಲ್ಲಿ ಹೇಳಿದ ಪ್ರೋಗ್ರಾಂ ಪ್ರಕಾರ ಇವನ್ನು ಎಲ್ಲ ಹಳ್ಳಿಗಳಲ್ಲೂ ಪೂರೈಸಬೇಕಾದರೆ ಇದಕ್ಕೆ ಏನಾದರೂ ಒಂದು ಪ್ಲಾನು ಮಾಡಿದ್ದೀರಾ ? ಹಾಗಿದ್ದರೆ ಇಂತಹ ಪ್ಲಾನು ಅಥವಾ ಯೋಜನೆಗೆ ಎಷ್ಟು ಖರ್ಚು ಮಾಡಬೇಕೆಂದಿದ್ದೀರಿ ?

ಶ್ರೀ ಬಿ. ಎಂ. ಪಾಟೀಲ್.—ಇಷ್ಟು ದಿವಸದೊಳಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ಯಾವುದಾದರೂ ಒಂದು ಕಾರ್ಯಕ್ರಮ ಹಾಕಕೊಂಡು ಅದನ್ನು ಕಾರ್ಯಗತ ಮಾಡಬೇಕಾದರೆ, ಪ್ಲಾನ್ ಮತ್ತು ಎಸ್ಟಿಮೇಟ್ ಎಲ್ಲ ಆಗಬೇಕು. ಅದೆಲ್ಲ ಆದಮೇಲೆ ಹಂತ ಹಂತವಾಗಿ ಕಾರ್ಯರೂಪಕ್ಕೆ ತರಬೇಕು. ಆ ಪ್ರಕಾರ ಮಾಡಲಾಗುತ್ತಿದೆ. ಇಂತಿಷ್ಟೇ ದಿವಸದಲ್ಲಿ ಮಾಡಲಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.